ಶ್ರೀ ಜೀವರಾಜ ಆಳ್ವ (ವಾಣಿಜ್ಯ, ವಾರ್ತಾ ಪ್ರವಾಸೋದ್ಯಮ ಮತ್ತು ಯುವಜನ ಸೇವಾ ರಾಜ್ಯ ಸಚಿವರು).—

ಅ) ನಿವೇಶನದ ಆಯ್ಕೆ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ನಿವೇಶನದ ಆಯ್ಕೆಯಾದ ತಕ್ಷಣ ಕಟ್ಟಡ ನಿರ್ಮಾಣದ ಬಗ್ಗೆ ತ್ವರಿತವಾಗಿ ಕ್ರಮ ಕೈಗೊಳ್ಳಲಾಗುವುದು.

ಕಂಕನಾಡಿ ತಲಪಾಡಿ ಹೆದ್ದಾರಿಯ ಅಪಘಾತಗಳು

೧೯೮೧. ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).— ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಗಳೂರು ಕಂಕನವಾಡಿಯಿಂದ ಕೇರಳದ ಗಡಿ ತಲಪಾಡಿವರೆಗಿನ ೧೬ಕಿ.ಮೀ ಹೆದ್ದಾರಿಯಲ್ಲಿ ೧೯೮೩–೮೪, ೧೯೮೪–೮೫ ನೇ ಡಿಸೆಂಬರ್ ಅಕೈರ್ ವರೆಗೆ ಸಂಭವಿಸಿದ ವಾಹನ ಅಪಘಾತಗಳೆಷ್ಟು

ಆ) ಇದರಿಂದ ಆದ ಜೀವ ಹಾನಿ ಎಷ್ಟು? ತೀವ್ರತರ ಅಪಘಾತಕ್ಕೊಳಗಾದವರ ಸಂಖ್ಯೆ ಎಷ್ಟು?

ಇ) ಈ ಸಣ್ಣ ದೂರದ ಪ್ರಯಾಣದಲ್ಲಿ ಸಂಭವಿಸುವ ವಾಹನ ಅಪಘಾತಗಳನ್ನು ತಪ್ಪಿಸಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಿ. ರಾಚಯ್ಯ (ಗೃಹಸಚಿವರು),—

ಅ) ಅಪಘಾತಗಳು ಈ ಕೆಳಕಂಡಂತಿವೆ.

೧೯೮೩	೮
೧೯೮೪	೧೦
೧೯೮೫	೬

ಆ) ಜೀವಹಾನಿ ಮತ್ತು ಗಾಯಗೊಂಡವರ ವಿವರಗಳು ಈ ಕೆಳಕಂಡಂತಿವೆ.

	ಮೃತರಾದವರು	ಗಾಯಗೊಂಡವರು
೧೯೮೩	೮	೧೨೬
೧೯೮೪	೧೧	೮೨
೧೯೮೫	೬	೩೯

ಇ) ೧. ಲೋಕೋಪಯೋಗಿ ಇಲಾಖೆಯವರು ಕಡಿದಾದ ತಿರುವುಗಳಲ್ಲಿ ಚಾರುವುದನ್ನು ತಡೆಗಟ್ಟಲು ರಸ್ತೆಯ ಮೇಲ್ಮೈಯನ್ನು ತಾರಿನಿಂದ ಒರಟು ಮಾಡಿರುತ್ತಾರೆ. ವಾಹನ ಚಾಲಕರಿಗೆ ಅಪಾಯ ಸ್ಥಳಗಳಲ್ಲಿ ವೇಗಮಿತಿ ತೋರಿಸುವ ಎಚ್ಚರಿಕೆ ಫಲಕಗಳನ್ನು ಹಾಕಲಾಗಿದೆ.

೨. ಅಪಘಾತಗಳನ್ನು ತಡೆಗಟ್ಟಲು ವೇಗಮಿತಿ ಮೀರುವ ವಾಹನಗಳನ್ನು ಮತ್ತು ಓವರ್ ಲೋಡಿಂಗ್ ಪ್ರಕರಣಗಳನ್ನು ಹಾಗೂ ಅಪಾಯಕಾರಿ ವಾಹನ ಚಾಲನೆ ಪ್ರಕರಣಗಳನ್ನು ಹೆಚ್ಚು ಹೆಚ್ಚು ಪತ್ತೆ ಹಚ್ಚಿ ಮೋಟಾರು ವಾಹನಗಳ ಕಾಯಿದೆಯನ್ವಯ ಮೊಕದ್ದಮೆಗಳನ್ನು ಹೂಡಲಾಗಿದೆ.